ಬಿತ್ತತೊಡಗಿದರು. ಅರ್ಧಮರ್ಧ ವಿದ್ಯಾಭ್ಯಾಸ ಮಾಡಿ, ಕೆಲಸವಿಲ್ಲದೆ ದಂಡಪಿಂಡಗಳಂತೆ ತಿರುಗುತ್ತಿದ್ದ ಅಮಾಯಕ ತರುಣರ ವೇದಿಕೆಯೊಂದನ್ನು ಕಟ್ಟಿ, ತಮ್ಮ ಕಾರ್ಯಾಚರಣೆಗೆ ಅನುಕೂಲವಾಗಿಸಿಕೊಂಡರು.

ಆಗಲೂ ಊರು ತನ್ನ ಪಾಡಿಗೆ ತಾನು ಎನ್ನುವಂತೆ ನೆಮ್ಮದಿಯಾಗಿತ್ತು.

★★★

ದುರಾದೃಷ್ಟವೋ ಎನ್ನುವಂತೆ ಊರಲ್ಲಿ ಉದ್ವಿಗ್ನತೆ ಕಾಣಿಸಿಕೊಂಡಿತು. ರಸ್ತೆಗಳ ಪ್ರತಿಯೊಂದು ಕೂಟಗಳಲ್ಲಿ ರಾತ್ರೋರಾತ್ರಿ ಕೇಸರಿ ಬಾವುಟಗಳು ಹಾರಾಡಲಾರಂಭಿಸಿದವು. ಸ್ವಲ್ಪ ದಿನಕ್ಕೆ ಹಸಿರು ಬಾವುಟ ಬಂದವು. ಮತ್ತೆ ಕೆಲವು ದಿನಕ್ಕೆ ಬಿಳಿ, ನೀಲಿ ಬಾವುಟಗಳು ಪಟಪಟವೆಂದವು. ಜನರು ಆ ಬಾವುಟಗಳನ್ನು ಅಚ್ಚರಿಯೆಂಬಂತೆ ನೋಡಿದರೆ ಹೊರತು ಅವುಗಳ ಬಗ್ಗೆ ಗಂಭೀರವಾಗಿ ಆಲೋಚಿಸಲಿಲ್ಲ. ಬಾವುಟ ಹಾರಿಸಿದವರು ಸುಮ್ಮನೆ ಕುಳಿತುಕೊಳ್ಳಲಿಲ್ಲ.

ಹಗಲೆಂಬೋ ಹಗಲು, ರಾತ್ರಿಯೆಂಬೋ ರಾತ್ರಿ ಊರಿನ ಮನೆ, ಅಂಗಡಿ, ಬೀದಿದೀಪಗಳ ಕಂಬ, ಮರ ಎಲ್ಲಿ ಬೇಕಲ್ಲಿ ಕೇಸರಿ, ಹಸಿರು, ಬಿಳಿ, ನೀಲಿ ಬಾವುಟಗಳು ಎತ್ತರೆತ್ತರಕ್ಕೆ ಪೈಪೋಟಿ ಎಂಬಂತೆ ಹಾರಾಡಿ, ಸಾವಕಾಶವಾಗಿ ವಿವಾದ ಸೃಷ್ಟಿಸತೊಡಗಿದವು. ಇವುಗಳ ಹಿಂದಿನ ಸೂತ್ರಧಾರರು ನಿಗೂಢವಾಗಿಯೇ ಇದ್ದರೂ ಜನಗಳ ನೆಮ್ಮದಿ ದಿನದಿಂದ ದಿನಕ್ಕೆ ಕದಡತೊಡಗಿತು. ಧಾರ್ಮಿಕ ಭಾವನೆಗಳನ್ನು ಸಂಕೇತಿಸುವ ಈ ಬಾವುಟಗಳು ಗಾಳಿಗೆ ರಭಸವಾಗಿ ಹಾರಾಡುತ್ತ ಕೆಲವು ಕೆಳಗೆ ಬಿದ್ದವು. ಕೆಲವು ಹರಿದವು, ಕೆಲವು ಬಣ್ಣ ಮಾಸಿಕೊಂಡವು. ಪ್ರಕೃತಿಯಿಂದ ಸಂಭವಿಸಿದ ಈ ಕ್ರಿಯೆಗೆ ಮತೀಯ ಶಕ್ತಿಗಳು ಕೋಮುದ್ವೇಷದ ಬಣ್ಣ ಬಳಿದು ಊರಿನ ಮನಸುಗಳನ್ನು ವಿಕಾರಗೊಳಿಸಿದವು. ಜೀವಪ್ರೀತಿಗಿಂತ ಬಾವುಟ ಪ್ರೀತಿಯೇ ಹೆಚ್ಚಾಗಿ, ಅವುಗಳ ಹಾರಾಟವೇ ಮಿಗಿಲಾಗಿ ಜೀವವಿರೋಧಿ ಚಟುವಟಿಕೆಗಳು ಕೋಲಾಹಲ ಸೃಷ್ಟಿಸಿದವು. ಕಾಲು ಕೆದರಿ ಜಗಳಕ್ಕೆ ಆಹ್ವಾನಿಸುವ, ಗುಡಿಗಳಲ್ಲಿ ದನದ ಮಾಂಸ, ಕಾಲು, ಬಾಲ, ಮಸೀದಿಯಲ್ಲಿ ಸತ್ತ ಹಂದಿ ಎಸೆಯುವ, ಗೋಡೆಗಳ ಮೇಲೆ ರಕ್ತ ಕಳಕಳ ಎನ್ನುವ ಬರಹಗಳನ್ನು ಬರೆಯುವ ತಲೆತಿರುಕ ಕೃತ್ಯಗಳು ನಡೆದವು.

ಪರಸ್ಪರ ಪ್ರತಿಭಟನೆ, ಅವಾಚ್ಯ ಶಬ್ದಗಳ ಉದ್ಘೋಷ, ಧರ್ಮದೇವರುಗಳ ನಿಂದನೆ ಮನುಷ್ಯನೊಡಲಲ್ಲಿ ಲಾವಾ ಕುದಿಸಿದವು. ಮಾರಕಾಸ್ತ್ರಗಳು ಜನರ ಕೈಗೆ ಬಂದವು. ಇನ್ನೇನು ನಾಲ್ಕಾರು ಹೆಣಗಳು ಉರುಳಬೇಕು ಎನ್ನುವಷ್ಟರ ಹೊತ್ತಿಗೆ ಪೊಲೀಸ್ ಪಡೆ ಜೀವಪುರವನ್ನು ತುಂಬಿಕೊಂಡು, ಗುಂಪು ಗುಂಪಾಗಿ ಓಡಾಡುವ ಜನರಿಗೆ ಲಾಠಿ ಬೀಸಿ ಕರ್ಫ್ಯೂ ಜಾರಿಗೊಳಿಸಿ, ಗಾಳಿಯಲ್ಲಿ ಹುಸಿ ಗುಂಡು ಹಾರಿಸಿತು.

ಜನಜೀವನ ಹೀಗೆ ಅಸ್ತವ್ಯಸ್ತಗೊಂಡಿರುವ ಸ್ಥಿತಿ ಜೀವಪುರದವರಿಗೆ ಹೊಸದೆನ್ನಿಸಿತ್ತು. ಊರು ಹೀಗೇಕೆ ರಾಕ್ಷಸವಾಯಿತೆಂದು ಗಂಭೀರವಾಗಿ ಆಲೋಚಿಸತೊಡಗಿದವರಿಗೆ ಕೇಸರಿ, ಹಸಿರು, ಬಿಳಿ, ನೀಲಿ ಬಾವುಟಗಳು ನೆನಪಾಗಿದ್ದವು. ಅವುಗಳ ಹಾರಾಟಮೇಲಾಟವು ಮನುಷ್ಯರ ಅಮೂಲ್ಯ ಜೀವನದೊಂದಿಗೆ ಚೆಲ್ಲಾಟವಾಡುತ್ತಿರುವುದು ಹಿಂಸಾತ್ಮಕವೂ, ಅಮಾನವೀಯವೂ ಆಗಿ ತೋರಿತು.

★★★

ನಾಲ್ಕು ದಿನಗಳ ಬಳಿಕ ಕರ್ಫ್ಯೂ ಸಡಿಲುಗೊಂಡಿತು. ಜನರು ಒಬ್ಬೊಬ್ಬರಾಗಿ ಹೊರಗೆ ಬಂದರು.

ಹಾಳೂರಿನಂತೆ ಗೋಚರಿಸುತ್ತಿದ್ದ ಊರು ನೋಡುತ್ತಿದ್ದಂತೆ ಅವರ ಕಣ್ಣುಗಳಲ್ಲಿ ವಿಷಾದ ಮಡುಗಟ್ಟಿತು. ಎತ್ತರೆತ್ತರಕ್ಕೆ ಹಾರಾಡುತ್ತಿರುವ ಬಾವುಟಗಳ ಬಗ್ಗೆ ಅವರಿಗೆ ಜಿಗುಪ್ಸೆ ಮೂಡತೊಡಗಿತು.